



ಅರುಣ ಪಿ. ಭಟ್ಟ

# ವಾರ ಭವಿಷ್ಯ: 03.11.2022ರಿಂದ 09.11.2022ರವರೆಗೆ




ಕುಟುಂಬ ಸದಸ್ಯರ ಜತೆಗೆ ಮಾತನಾಡುವಾಗ ಎಚ್ಚರಿಕೆಯಿಂದ ಇರಬೇಕು. ಸಿಟ್ಟಿನ ಕೈಗೆ ಬುದ್ಧಿ ಕೊಟ್ಟರೆ ಪರಿತಪಿಸುವಂತಾಗುತ್ತದೆ. ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಇದೆ. ಹೊಸ ಉದ್ಯೋಗಕ್ಕೆ ಪ್ರಯತ್ನಿಸುವವರಿಗೆ ನಿರೀಕ್ಷಿತ ಯಶಸ್ಸು ದೊರೆಯುವ ಸಾಧ್ಯತೆ ಹೆಚ್ಚಿದೆ. ವಾರಾಂತ್ಯಕ್ಕೆ ಹಣಕಾಸು ಸ್ಥಿತಿ ಇನ್ನಷ್ಟು ಉತ್ತಮವಾಗಲಿದೆ. ಶುಭದಿನ 04. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಆಸ್ತಿ ಖರೀದಿ ಮಾಡುವವರಿಗೆ ಈ ವಾರ ಸೂಕ್ತ. ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ವ್ಯಾಜ್ಯಗಳು ಇದ್ದಲ್ಲಿ ನಿರೀಕ್ಷಿತ ಫಲಿತಾಂಶ ಪಡೆಯಲಿದ್ದೀರಿ. ಕೌಟುಂಬಿಕ ಜೀವನ ಶಾಂತಯುತವಾಗಿ ಇರುತ್ತದೆ. ಕಾನೂನು ವಿಚಾರಗಳಲ್ಲಿ ಅದೃಷ್ಟ ನಿಮ್ಮ ಕಡೆಗೆ ಇರುತ್ತದೆ. ಮಾರಾಟ ಹಾಗೂ ಉತ್ಪಾದನೆ ಕ್ಷೇತ್ರದಲ್ಲಿ ಇರುವವರಿಗೆ ವಾರದ ಆರಂಭದಲ್ಲಿ ಅನುಕೂಲಕರ. ಶುಭದಿನ 06. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಅನಾರೋಗ್ಯ ಸಮಸ್ಯೆಗಳು ನಿವಾರಣೆ ಆಗುತ್ತವೆ. ಇನ್ನು ದೈನಂದಿನ ವ್ಯವಹಾರಗಳಲ್ಲಿ ಶಿಸ್ತು ರೂಢಿ ಮಾಡಿಕೊಳ್ಳಲಿದ್ದೀರಿ. ಈ ವಾರ ಉದ್ಯೋಗಸ್ಥರು– ವ್ಯಾಪಾರಸ್ಥರು ಇಬ್ಬರಿಗೂ ಉತ್ತಮ ಲಾಭ ಕಾಣುವ ಯೋಗ ಇದೆ. ಪ್ರೀತಿಪಾತ್ರರ ಜತೆಗೆ ಒಟ್ಟಿಗೆ ಊಟ ಹಾಗೂ ಮನರಂಜನೆಯನ್ನು ಅನುಭವಿಸಲಿದ್ದೀರಿ. ಆಸ್ತಿ ಮಾರಾಟದಿಂದ ಲಾಭವಾಗಲಿದೆ. ಶುಭದಿನ 05. ವಿಷ್ಣು ಸಹಸ್ರನಾಮ ಪಠಿಸಿರಿ.




ಕಾನೂನು ವ್ಯಾಜ್ಯಗಳಿದ್ದಲ್ಲಿ ನಿಮ್ಮ ಪರವಾಗಿ ಆಗಬಹುದು. ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ ಯಶಸ್ಸು ಸಿಗುವ ಸಾಧ್ಯತೆ ಹೆಚ್ಚಿದೆ. ವಾರದ ಆರಂಭದಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಆದರೆ ಕ್ರಮೇಣ ಆರೋಗ್ಯ ಸುಧಾರಿಸುತ್ತಾ ಬರುತ್ತದೆ. ಸಂಗಾತಿ ಮಕ್ಕಳ ಮೇಲೆ ಹೆಚ್ಚಿನ ಗಮನ ವಹಿಸಬೇಕಾಗುತ್ತದೆ. ಗೃಹಾಲಂಕಾರ ವಸ್ತುಗಳನ್ನು ಖರೀದಿಸುವ ಸಾಧ್ಯತೆ ಇದೆ. ಶುಭದಿನ 07. ಆಂಜನೇಯ ಸ್ತೋತ್ರ ಪಠಿಸಿರಿ




ನಿಮ್ಮ ಹಣಕಾಸು ಸ್ಥಿತಿ ಉತ್ತಮ ಮಾಡಿಕೊಳ್ಳಲು ಹಲವು ಹೊಸ ಅವಕಾಶಗಳು ನಿಮಗೆ ದೊರೆಯಲಿವೆ. ಪ್ರೀತಿಪಾತ್ರರ ಜತೆ ಪ್ರವಾಸ ಮತ್ತು ಶಾಪಿಂಗ್ ಮಾಡಲಿದ್ದೀರಿ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಮೇಲಧಿಕಾರಿಗಳಿಂದ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ. ನಿಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳಲು ದೊರೆಯುವ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಳ್ಳಿ. ಶುಭದಿನ 06. ಸೌಂದರ್ಯಲಹರಿ ಪಠಿಸಿರಿ.




ಉದ್ಯೋಗ ಬದಲಾವಣೆಗೆ ಯತ್ನಿಸುತ್ತಿರುವವರು ಅದಕ್ಕಾಗಿ ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ವಾರದ ಮಧ್ಯ ಭಾಗದಲ್ಲಿ ಹಣಕಾಸಿನ ಅನುಕೂಲ ಒದಗಿಬರಲಿದೆ. ಮಕ್ಕಳ ಮದುವೆಗಾಗಿ ಸೂಕ್ತ ಸಂಬಂಧಕ್ಕಾಗಿ ಹುಡುಕುತ್ತಿದ್ದರೆ ನಿಮ್ಮ ಪ್ರಯತ್ನದಲ್ಲಿ ಯಶಸ್ಸು ಸಿಗುತ್ತದೆ. ವಾರದ ಮಧ್ಯ ಭಾಗದಲ್ಲಿ ನಿಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶ ದೊರೆಯುತ್ತದೆ. ಶುಭದಿನ 08. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವಾರದ ಆರಂಭದಲ್ಲಿ ಪ್ರಗತಿ ಇದೆ. ನಿಮ್ಮ ಶ್ರಮವೇ ಗುರಿಯನ್ನು ನಿರ್ಧಾರ ಮಾಡುತ್ತದೆ. ಮೇಲಧಿಕಾರಿಗಳ ಜತೆಗೆ ಉತ್ತಮ ಬಾಂಧವ್ಯ ಏರ್ಪಡುತ್ತದೆ. ಕುಟುಂಬದಲ್ಲಿ ಕಾರ್ಯಕ್ರಮ ಅಥವಾ ಧಾರ್ಮಿಕ ಆರಾಧನೆ ನಿಗದಿ ಆಗಲಿದೆ. ವಾರದ ಮಧ್ಯದಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ನಿಧಾನವಾಗಿ ಜೀವನಶೈಲಿಯಲ್ಲಿ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಶುಭದಿನ 04. ಹನುಮಾನ್ ಚಾಲಿಸ್ ಪಠಿಸಿರಿ




ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಎದುರಾಗುತ್ತದೆ. ಸಂಬಂಧ ಸುಧಾರಣೆ, ವೃತ್ತಿ ಬದುಕಿನ ಏಳ್ಗೆಗೆ ಅವಕಾಶ ದೊರೆಯುತ್ತದೆ. ಪ್ರತಿಸ್ಪರ್ಧಿಗಳನ್ನು ಎದುರಿಸಲು ನಿಮ್ಮ ಸಾಮರ್ಥ್ಯ ಹೆಚ್ಚಾಗಲಿದೆ. ಬಹಳ ಕಾಲದಿಂದ ಬಾಕಿ ಇದ್ದ ಯೋಜನೆಗಳನ್ನು ಪೂರ್ಣಗೊಳಿಸಲಿದ್ದೀರಿ. ಸರ್ಕಾರಿ ಸೇವೆಯಲ್ಲಿ ಇರುವವರಿಗೆ ನಾನಾ ರೀತಿಯಲ್ಲಿ ಅನುಕೂಲಗಳಿವೆ. ಶುಭದಿನ 09. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.




ವಾರದ ಆರಂಭದಲ್ಲಿ ಅತ್ಯುತ್ತಮವಾದ ಸಮಯ ಇದೆ. ಆರೋಗ್ಯ ಉತ್ತಮವಾಗಿರುತ್ತದೆ. ನಿಮ್ಮ ಉದ್ಯೋಗ ಬದಲಾವಣೆ ಬಯಸಿದಲ್ಲಿ ವಾರದ ಆರಂಭದಲ್ಲೇ ಶುಭ ವಾರ್ತೆ ಹಾಗೂ ಹಲವು ಅವಕಾಶಗಳು ದೊರೆಯಲಿವೆ. ತಾಂತ್ರಿಕ ವಿಷಯ ಪರಿಣತರು ಹೊಸ ಅವಕಾಶಗಳನ್ನು ಎದುರು ನೋಡಬಹುದು. ವಿಶ್ರಾಂತಿಗಾಗಿ ದೂರ ಪ್ರಯಾಣ ಮಾಡಬಹುದು. ಶುಭದಿನ 06. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವಾರದ ಆರಂಭದಲ್ಲಿ ವೃತ್ತಿಪರರಿಗೆ ಮುಖ್ಯವಾದ ಅವಕಾಶಗಳು, ಪ್ರಗತಿಗೆ ಆಯ್ಕೆಗಳು ದೊರೆಯುತ್ತವೆ. ದೊಡ್ಡ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಆಸೆ ಪೂರೈಸುತ್ತದೆ. ವೃತ್ತಿಪರ ಕಾರಣಗಳಿಗೆ ಸ್ಥಳಾಂತರ ಆಗುವ ಸಾಧ್ಯತೆಗಳಿವೆ. ಸೋಂಕು, ಅಲರ್ಜಿ ಸಮಸ್ಯೆ ಇರುವವರು ಬಹಳ ಎಚ್ಚರಿಕೆಯಿಂದ ಇರಬೇಕು. ಸಂಗಾತಿ ಜತೆಗೆ ಸಂತಸದ ಸಮಯ ಕಳೆಯಲಿದ್ದೀರಿ. ಶುಭದಿನ 03. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.




ಹಿರಿಯ ಅಧಿಕಾರಿಗಳ ಸಹಾಯದಿಂದ ನಿಮ್ಮ ಕೌಶಲವನ್ನು ಹೆಚ್ಚು ಮಾಡಿಕೊಳ್ಳುತ್ತೀರಿ. ವಾರದ ಆರಂಭದಲ್ಲಿ ಮಕ್ಕಳಿಂದ ನಿಮಗೆ ಶುಭ ಸುದ್ದಿ ಇದೆ. ಅವರಿಂದ ನೀವು ಹೆಮ್ಮೆ ಪಡುತ್ತೀರಿ. ವಿವಿಧ ಮೂಲಗಳಿಂದ ಸಂಪತ್ತು ಸಂಗ್ರಹ ಆಗುತ್ತದೆ. ವೈಯಕ್ತಿಕ ಸಂಬಂಧವು ಸೌಹಾರ್ದಯುತವಾಗಿ ಇರುತ್ತದೆ. ಪ್ರೀತಿಪಾತ್ರರಿಗೆ ಮತ್ತಷ್ಟು ಹತ್ತಿರವಾಗುತ್ತೀರಿ. ಶುಭದಿನ 04. ಗೋಪೂಜೆ ಮಾಡಿ. ಶಿವಕವಚ ಪಠಿಸಿರಿ.




ಈ ವಾರ ವೈಯಕ್ತಿಕ ಹಾಗೂ ವೃತ್ತಿಪರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಹಾಗೂ ಬಡ್ತಿ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ಈ ವಾರ ಪ್ರಗತಿ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಶುಭದಿನ 08. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.